ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ಸರ್ಕಾರದವರು 350 ನರ್ಸರಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಬಾಲವಾಡಿಯನ್ನು ತಾಲ್ಲೂಕ್ ಬೋರ್ಡಿನಿಂದ ನಡೆಸಬೇಕಾಗುತ್ತದೆ. ಮತ್ತು ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಸಾವಿರ ನರ್ಸರಿ ಸ್ಕೂಲ್‌ಗಳನ್ನು ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ, ಆದರೆ ದುಡ್ಡಿನ ಕೊರತೆಯಿಂದಾಗಿ ಸದ್ಯಕ್ಕೆ 350 ಮಾತ್ರ ತೆಗೆದುಕೊಂಡಿದ್ದೇವೆ. ಉಳಿದದ್ದನ್ನು ಬಜೆಟ್ಟಿನಲ್ಲಿ ಹಣದ ಅನುಕೂಲತೆಯನ್ನು ನೋಡಿಕೊಂಡು ಇನ್ನೂ 700 ನರ್ಸರಿ ಸ್ಕೂಲ್‌ಗಳನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಮಾನ್ಯ ಮಂತ್ರಿಗಳು ನರ್ಸರಿ ಶಾಲೆಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ 1000 ತೆರೆಯಬೇಕೆಂದು ತೀರ್ಮಾನ ಮಾಡಿದ್ದೇವೆ ಎಂದು ಹೇಳಿದರು. ಈಗ 350 ಮಾತ್ರ ತೆಗೆದುಕೊಂಡಿದ್ದೇವೆಂದು ಎಂದು ಹೇಳಿದ್ದಾರೆ. ಇದಕ್ಕೆ ದುಡ್ಡಿಲ್ಲ ಎಂಬ ಹೇಳತಕ್ಕುದ್ದು ಸರಿಯಲ್ಲ, ರಾಜ್ಯದ ಕಾಲು ಭಾಗ ಬಜೆಟ್ಟನ್ನು ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸುವಾಗ ನರ್ಸರಿ ಶಾಲೆಗಳಿಗೆ ಮೊದಲು ಹಣ ಒದಗಿಸಿ, ಕೂಲಿಗಾರರು ನಿರ್ಗತಿಕರು, ಮತ್ತು ಹರಿಜನರು ಇರತಕ್ಕ ಪ್ರದೇಶದಲ್ಲಿ ನರ್ಸರಿ ಶಾಲೆಗಳನ್ನು ಮಾಡಿಸಿಕೊಡುತ್ತೀರಾ ಸ್ವಾಮಿ ?

ಅಧ್ಯಕ್ಷರು.—ಇದು ತಿರಹಟ್ಟಿ ತಾಲ್ಲೂಕಿನ ಪ್ರಶ್ನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಈ ಬಾಲವಾಡಿಗಳು ಮತ್ತು ಶಿಶುವಿಹಾರಗಳು ಮಹಿಳೆ ಮತ್ತು ಶಿಶುಕಲ್ಯಾಣ ಇಲಾಖೆಗೆ ಸೇರಿದ್ದೋ ಅಥವಾ ಶಿಕ್ಷಣ ಇಲಾಖೆಗೆ ಸೇರಿದೊ ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಈ ನರ್ಸರಿ ಶಾಲೆಗಳು ಶಿಕ್ಷಣ ಇಲಾಖೆಗೆ ಸೇರಿದ್ದು. ಬಾಲವಾಡಿಗಳು ತಾಲ್ಲೂಕು ಬೋರ್ಡಿಗೆ ಸೇರಿದ್ದು.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಮಹಿಳೆ ಮತ್ತು ಶಿಶುಕಲ್ಯಾಣ ಇಲಾಖೆ ಮತ್ತು ಅದಕ್ಕೆ ಒಬ್ಬ ಮಂತ್ರಿ ಯಾತಕ್ಕೆ ಇರಬೇಕು ?

(ಉತ್ತರ ಇಲ್ಲ.)

ಶ್ರೀ ಬಾಪೂಗೌಡ.—ನರ್ಸರಿ ಮತ್ತು ಶಿಶುವಿಹಾರಗಳನ್ನು ಖಾಸಗಿ ಸಂಸ್ಥೆಗಳು ನಡೆಸುತ್ತಿದ್ದರೆ ಅವರಿಗೆ ಧನಸಹಾಯ ಕೊಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಹಳೆ ಮೈಸೂರಿನ ಅರ್ಬನ್ ಏರಿಯದಲ್ಲಿರತಕ್ಕ ನರ್ಸರಿ ಶಾಲೆಗಳಿಗೆ 50 ಪರ್ಸೆಂಟ್ ಗ್ರಾಂಟ್ ಕೊಡುತ್ತೇವೆ. ರೂರಲ್ ಪ್ರದೇಶದಲ್ಲಿರತಕ್ಕ ನರ್ಸರಿ ಶಾಲೆಗಳಿಗೆ 70 ಪರ್ಸೆಂಟ್ ಗ್ರಾಂಟ್ ಕೊಡುತ್ತೇವೆ. ಆದರೆ ಹೊಸ ಕರ್ನಾಟಕದಲ್ಲಿ ಅಂದರೆ ಹೈದರಾಬಾದ್ ಮತ್ತು ಬಾಂಬೆ ಕರ್ನಾಟಕದಲ್ಲಿ..... ...

ಅಧ್ಯಕ್ಷರು.—ಇದು ತಿರಹಟ್ಟಿ ತಾಲ್ಲೂಕಿಗೆ ಮಾತ್ರ ಸಂಬಂಧಿಸಿದ ಪ್ರಶ್ನೆ. ನೀವು ಎಲ್ಲಾ ಹೇಳಂತಾ ಹೋದರೆ ಕೊನೆಯೇ ಇರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆ ಕಡೆ ಈ ರೀತಿ ಗ್ರಾಂಟ್ ಕೊಡುತ್ತಾ ಇಲ್ಲ. ಆ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ವಿ. ವಿ. ಪಾಯಿ.—ಸರ್ಕಾರದವರು ಅವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸರಿಯಾಗಿ ನಡೆಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

Minimum Programme of Prohibition.

349. SRI M. H. JAYAPRAKASH NARAYAN (Sirsi).— Will the Minister for University Education and Excise be pleased to state:—

(*a*) the minimum programme of prohibition indicated by Central Government to State Government ;

(*b*) the various arrangements made so far by the Government for implementing the said minimum Programme in the State ;

(*c*) whether the Government has proposed to give financial assistance to the voluntary service organisation for compaigning and publicity works for eradication of this evil in the society and reduce the consumption of intoxicating drinks ;

(*d*) whether there is a proposal before the Government for implementing the prohibition in a phased manner in the State;

(*e*) if so, the amount of income and loss realised by the Government from this ?

SRI S. M. YAHYA (Minister for University Education and Excise);—

(*a*) *Vide* Statement 'A' appended.

(*b*) *Vide* Statement 'B' appended.

(*c*) No.

(*d*) No.

(*e*) Does not arise in view of the reply to clause (*a*).

STATEMENT—'A'

1. Banning of advertisements of intoxicating drinks.

2. Drinking in public places should ceases and alcoholic beverages should not be served in hotels, restaurants, clubs, etc.

3. Liquor shops should not be located near religious places, harijan colonies, railway stations, educational institutions, etc.

4. Children below 18 years of age are not to be served with liquors.

5. Efforts should be made to reduce the percentage of alcohol in Beer to 5% and less.

6. Curb on production of liquor and consumption.

7. To strengthen the propaganda and publicity against the evils of drinks.

STATEMENT—'B'

1. *Advertisements.*—Under Section 15 of the Karnataka Prohibition Act, 1961, advertisements of intoxicants are already prohibited The attention of Deputy Commissioners of Districts have been drawn to this statutory provision and they have been advised to remove any advertisement displayed in violation of this provision.

2. *Drinking in Public Places.*—The suggestion of the Government of India is that drinking in public places should cease and alcoholic beverages should not be served in hotels, hostele, restaurants, clubs and public receptions. The present position is that drinking in hostels is not permitted. Even now no drinks are served at receptions organised by the State Government except to foreign invitees.

3. *Location of Liquor Shops,*—Government have already issued instructions that liquor shops should not be located near religious places. harijan colonies, railway stations, etc. In a few cases there has been practical difficulty in adhering to these instructions.

4. *Service of Alcoholic Beverages to Children.*—There is already a ban on the service of liquors to children below the age of 18 years.

5. *Content of Alcohol.*—Efforts are being made to reduce the percentage of alcohol in Beer to 5% and less.

6. *Curb on Production and Consumption.*—A decision has been taken that from 1st April 1976, no licenses should be granted for additional capacity or expansion of existing capacity of distilleries or for brewing alcoholic drinks.

7. *Publicity and Propaganda.*—The Temperance Board in the State is already pursuading people in weaning away from the drinking habit.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಸ್ವಾಮಿ, ಮಹಾತ್ಮ ಗಾಂಧಿಯವರು ಸ್ವರಾಜ್ಯ ಬರುವುದಕ್ಕೆ ಮುಂಚೆ ನಾನೇನಾದರೂ ಭಾರತದ ಡಿಕ್ಟೇಟರ್ ಆದರೆ ಮೊದಲು ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತರಲು ಆಜ್ಞೆ ಮಾಡುತ್ತೇನೆ ಎಂದು ಹೇಳಿದ್ದರು. ಮಹಾತ್ಮ ಗಾಂಧೀಜಿಯವರು ಆದರ್ಶ ತತ್ವಗಳನ್ನು ಅನುಕರಣೆ ಮಾಡತಕ್ಕ ತಾವು ಈ ಪ್ರೊಹಿಬಿಷನ್ ಬಗ್ಗೆ ಯಾವ ತತ್ವವನ್ನು ಅನುಸರಿಸಿದ್ದೀರಿ ಎಂಬುದನ್ನು ತಾವು ಹೇಳುತ್ತೀರಾ ಸ್ವಾಮಿ?

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೆ, ಅವರು ಮಹಾತ್ಮ ಗಾಂಧಿಯವರ ತತ್ವವನ್ನು ಅನುಸರಿಸುತಿದ್ದೀರಿ ಎಂದು ಆರೋಪ ಮಾಡುತ್ತಿದ್ದಾರೆ, ಅದು ಸರಿಯಲ್ಲ.

† ಶ್ರೀ ಎಸ್. ಎಂ. ಯಾಹ್ಯಾ.—ಮಹಾತ್ಮ ಗಾಂಧಿಯವರು ಪ್ರೊಹಿಬಿಷನ್ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದೇ ರೀತಿ ದೊಡ್ಡ ದೊಡ್ಡ ಇತರ ನಾಯಕರೂ ಪಾನನಿರೋಧದ ವಿಚಾರದಲ್ಲಿ ತಮ್ಮ ತಮ್ಮ ಅಭಿಪ್ರಾಯ ಹೇಳಿದ್ದಾರೆ. Prohibition is always a controversial and debatable topic in society; there are habits good habits and bad habits. How to reconcile the entire think is the practical aspect. It is an administrative aspect. As far as the principal is concerned we also believe the principal enunciated by the father of the Nation.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ತಕ್ಷಣವನ್ನು ಒಪ್ಪಿಕೊಂಡಿದ್ದೇವೆ ಎಂದು ಸರ್ಕಾರದವರು ಆಫರ್ ಕೊಡಿಸಿದ್ದಾರೆ. ಆದರೆ ಸ್ಟೇಟ್‌ಮೆಂಟ್ 'ಎ' ನಲ್ಲಿ ಹೇಳಿರತಕ್ಕ 7 ಕಂಡೀಷನ್‌ಗಳನ್ನೂ ನಿಜವಾಗಿ ಕಾರ್ಯಗತ ಮಾಡಿದ್ದೀರಾ ಎಂಬುದನ್ನು ತಾವು ಹೇಳುತ್ತೀರಾ? ಕಾರ್ಯಗತವಾಗಿರುವುದರ ಬಗ್ಗೆ ತಾವೇನಾದರೂ ವರದಿಯನ್ನು ತರಿಸಿದ್ದೀರಾ ಸ್ವಾಮಿ ?

ಶ್ರೀ ಎಸ್. ಎಂ. ಯಾಹ್ಯಾ.—ಉತ್ತರದಲ್ಲಿ ನಾವು ಏನು ಕಾರ್ಯವನ್ನು ಮಾಡಿದ್ದೇವೆ ಎಂಬುದನ್ನು ಚೆನ್ನಾಗಿ ಹೇಳಿದ್ದೇವೆ. ವರದಿಗಳ ಮುಖಾಂತರ ನಮಗೆ ಇನ್‌ಫರ್ಮೇಷನ್ ಬರುತ್ತದೆ. ಆದ್ದರಿಂದ ಸರ್ಕಾರವು ಈ ವಿಚಾರದಲ್ಲಿ ಕೆಲವು ಕ್ರಮಗಳನ್ನು ಕೈಗೊಂಡಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೆಲವು ಬ್ಯಾಡ್ ಹ್ಯಾಬಿಟ್ಸ್ ಮತ್ತು ಕೆಲವು ಗುಡ್ ಹ್ಯಾಬಿಟ್ಸ್ ಎರಡೂ ಇವೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ಆಗುವುದು ಬ್ಯಾಡ್ ಹ್ಯಾಬಿಟ್ ಅಲ್ಲವೇ ಸ್ವಾಮಿ?

(ಉತ್ತರ ಇಲ್ಲ)

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, Government have already issued instructions that liquor shops should not be located near Harijan colonies religious places, ಎಂದು ಹೇಳಿದ್ದೀರಿ. ಈಗ ಹರಿಜನ ಕಾಲೋನಿಗಳ ಹತ್ತಿರ ಇರತಕ್ಕ ಮಧ್ಯಪಾನ ಅಂಗಡಿಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ —ಬರೀ ಪ್ರಯತ್ನ ಮಾತ್ರ ಮಾಡುತ್ತಿಲ್ಲ. ಕಾರ್ಯವನ್ನೂ ಸಹ ಮಾಡಿದ್ದೇವೆ. ಈಗ ಲೇಟೆಸ್ಟ್ ರಿಪೋರ್ಟ್ ಪ್ರಕಾರ 79 ಷಾಪ್‌ಗಳನ್ನು ಅಲ್ಲಿಂದ ಷಿಫ್ಟ್ ಮಾಡಿದೆ. ಷಿಫ್ಟ್ ಮಾಡುವಾಗ ಸ್ವಲ್ಪ ಎಚ್ಚರಿಕೆಯಿಂದ ಹೋಗಬೇಕಾಗುತ್ತದೆ. There are good forces which would like that shops should be placed in proper places and there are some wrong and improper forces which would like to be benefited by shifting the shops. ಆದ್ದರಿಂದ ಸರ್ಕಾರದವರು ಇನ್ನೂ ಹೆಚ್ಚು ಎಚ್ಚರಿಕೆಯಿಂದ ಕೆಲಸ ಮಾಡುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.— ಕುಡಿಯುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಆದರೆ ದೇವಸ್ಥಾನಗಳ ಹತ್ತಿರ, ಪಾಠಶಾಲೆಗಳ ಹತ್ತಿರ, ಕಾರ್ಮಿಕರು ಇರತಕ್ಕ ಜಾಗದಲ್ಲಿ ಮತ್ತು ಬಸ್ ಸ್ಟ್ಯಾಂಡ್‌ಗಳ ಸಮೀಪದಲ್ಲಿ ಕುಡಿಯುವ ಜನರ ಹಾವಳಿ ಇರುವುದರಿಂದ ಬಹಳ ತೊಂದರೆಯಾಗಿದೆ. ಆದಕಾರಣ ಮುಂದೆ ಲೈಸೆನ್ಸ್ ಕೊಡುವಾಗ ಕ್ರಮ ತೆಗೆದುಕೊಂಡು ಅಂಥ ಜಾಗಗಳಲ್ಲಿ ಮಧ್ಯ ಪಾನದ ಅಂಗಡಿಗಳನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಎಸ್ ಎಂ. ಯಾಹ್ಯಾ.— ನಾವು ಈ ಬಗ್ಗೆ ಕಾರ್ಯಕ್ರಮ ಮಾಡುತ್ತಿದ್ದೇವೆಂದು ಹೇಳಿದೆ, ಕೆಲವು ಕಡೆ ಈಗಾಗಲೇ ಮಾಡಿದ್ದೇವೆ, ಇನ್ನು ಕೆಲವು ಕಡೆ ನಿದಾನವಾಗಿ ಮಾಡುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸ್ವಾಮಿ, ನಾನು ಈ ವಿಷಯವನ್ನು ಈ ನದನ ದಲ್ಲಿ ತಮ್ಮ ಗಮನಕ್ಕೆ ಅನೇಕ ಸಲ ತಂದಿದ್ದೇನೆ. ನನ್ನ ಕ್ಷೇತ್ರದ ಬ್ರಗೇಡ್ ರೋಡಿನಲ್ಲಿ 10 ಗಜ ದಲ್ಲಿ 50 ಗಜದಲ್ಲಿ ಹೆಂಡದಂಗಡಿಗಳಿವೆ. ಅವನ್ನು ಬೇರೆ ಕಡೆಗೆ ಷಿಫ್ಟ್ ಮಾಡುವಂತೆ ಮಾಡುತ್ತೆವೆಂದು ತ್ತೇವೆಂದು ಹೇಳುತ್ತೀರಿದ್ದೀರಿ. ಈಗಲಾದರೂ ನಿರ್ದಿಷ್ಟವಾದ ಕಾಲದಲ್ಲಿ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ —ಆ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಕೆ. ಹೆಚ್. ಹನುಮೆಗೌಡ.—ದೇಶದ ಬಹುಭಾಗದಲ್ಲಿ ಬರಗಾಲ ಬಂದಿದೆಯೆಂದು ಸರ್ಕಾರದವರು ಕೂಡ ಜನಗಳ ಜೀವನೋಪಾಯಕ್ಕೆ ಕೆಲಸ ಕೊಟ್ಟು ಕೆಲಸ ಮಾಡಿಪು ತ್ತಿದ್ದಾರೆ. ಬಡ ಜನತೆ ಕೂಲಿ ಮಾಡಿ ಎಷ್ಟು ಸಂಪಾದಿಸುತ್ತಾರೆ? ಅಂಥವರು ಸಹ ಕುಡಿಯುವು ದಕ್ಕೆ ಹೋಗುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಅದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಸ್. ಎಂ. ಯಾಹ್ಯ.—ಕುಡಿಯುವ ಚಟವನ್ನು ತಪ್ಪಿಸುವುದಕ್ಕೆ ಬರಗಾಲ ಬಂದರು ಸಾಧ್ಯವಿಲ್ಲ ಎಂಬುದನ್ನು ಶಾಮಣ್ಣನವರು ಒಪ್ಪಿಕೊಂಡಿದ್ದಾರೆ. ಜನರನ್ನು ಎಜುಕೇಟ್ ಮಾಡಿಸಬೇಕು, ಒಳ್ಳೆಯ ಅಭ್ಯಾಸವನ್ನು ಕಲಿಸಬೇಕು, ದುರಭ್ಯಾಸಗಳನ್ನು ಹೋಗಲಾಡಿಸಬೇಕು. ಆಗ ಈ ಸಮಸ್ಯೆಯನ್ನು ಪರಿಹರಿಸಬಹುದು. ಯಾವುದನ್ನು ಕಲಿಸಬೇಕೋ ಅವನ್ನು ಕಲಿಸಬೇಕಾದರೆ ತಡವಾಗುತ್ತದೆ. ಅದಕ್ಕೆ ಎಲ್ಲರೂ ಸಹಕಾರ ನೀಡಿದರೆ ಆಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ವಿ. ಎನ್. ಪಾಟೀಲ್.—ಕಮ್ಯಾಂಡ್‌ಮೆಂಟ್ ಪ್ರೊಗ್ರಾಂ ಪ್ರಕಾರ ಪ್ರೊಹಿಬಿಷನ್ ತರುವುದಕ್ಕೆ ಮೊದಲನೆ ಹೆಜ್ಜೆ ಎಂದು ತಿಳಿದುಕೊಳ್ಳಬೇಕೋ ಅಥವಾ ಅನಿವಾರ್ಯವಾಗಿ ಮೊದಲನಿಂದ ಆರ್ಡರ್ ಬಂದಿದೆ ಎಂದು ತಿಳಿದುಕೊಳ್ಳಬೇಕೋ ? ಲಕ್ಷುರಿ ಇಂಟಾಕ್ಸಿಕೇಶನ್ ಪವರ್ ಇಂಟಾಕ್ಸಿಕೇಶನ್‌ಗಿಂತ ದೊಡ್ಡದು ಎಂಬುದನ್ನು ಒಪ್ಪುತ್ತೀರಾ?

SRI S. M. YAHYA.—These are some of the restrictions imposed. We cannot say it is the first stage or not. But these are the restrictions which are necessary so that there should not be so much of chaos and disorder in certain places.

SRI M. H. JAYAPRAKASH NARAYAN.—To strengthen the propaganda and publicity against the evils of drinking ಎಂದು ಕೇಂದ್ರ ಸರ್ಕಾರದ ಕೊನೆಯ ಕಂಡೀಷನ್ ಇದೆ: ಈಗ ಏನಾಗಿದೆ ಎಂದರೆ ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ರಾಮಕೃಷ್ಣ ತೀರ್ಥ ಕೊಟ್ಟು ಹರಿಜನರನ್ನು 20 ವರ್ಷ ಹಿಂದಕ್ಕೆ ಹಾಕಿದರು. ಮಾನ್ಯ ಮುಖ್ಯಮಂತ್ರಿಗಳು ಹರಿಜನೋದ್ಧಾರದ ಬಗ್ಗೆ ಆಸಕ್ತಿ ವಹಿಸಿ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಎಕ್ಸೈಜ್ ಮಿನಿಸ್ಟರ್ ಆಗಿದ್ದಾಗ ಈ ಮನೆಯಲ್ಲಿ ಒಟ್ಟು ಉತ್ಪನ್ನದಲ್ಲಿ 100ಕ್ಕೆ 10 ಭಾಗವನ್ನು ಹರಿಜನೋದ್ಧಾರಕ್ಕಾಗಿ ವಿನಿಯೋಗ ಮಾಡುತ್ತೇವೆಂದು ಹೇಳಿದರು. ಅವರು ಕೊಟ್ಟ ಭರವಸೆ ಇದುವರೆಗೆ ಜಾರಿಗೆ ಬರಲಿಲ್ಲ. ಈಗ ಒಂದು ಚೆಂಪರೆನ್ಸ್ ಬೋರ್ಡ್ ಮಾಡಿದ್ದಾರೆ. ಮಿತವಾಗಿ ಹೆಂಡವನ್ನು ಕುಡಿಯಿರಿ ಎಂದು ಹೇಳತಕ್ಕ ನೀತಿಯನ್ನು ಜಾರಿಗೆ ತಂದಿದ್ದಾರೆ ಆ ಚೆಂಪರೆನ್ಸ್ ಬೋರ್ಡಿಗೆ ಸಾಕಷ್ಟು ಹಣವನ್ನು ಒದಗಿಸಿ ಗ್ರಾಮಾಂತರ ಪ್ರದೇಶಗಳೆಲ್ಲ ಹೆಚ್ಚು ಹೆಚ್ಚಾಗಿ ಪ್ರಚಾರ ಮತ್ತು ಪ್ರಕಟಣೆ ನಡೆಯುವಂತೆ ಮಾಡುತ್ತೀರಾ?

ಶ್ರೀ ಎಸ್. ಎಂ. ಯಾಹ್ಯ.—ಯೋಚನೆ ಮಾಡುತ್ತೇನೆ.

Cold Storage Plant in Mudigere Town

54. SRI G. PUTTASWAMY (Mudigere).—Will the Minister of State for Fisheries and Horticulture be pleased to state:—

(*a*) whether it has come to the notice of Government that the fish eating population at Mudigere Town are experiencing difficulty for want of a Cold Storage Plant to preserve fish;

(*b*) whether Government has any proposal before them to sanction a cold Storage Plant for Mudigere town;

(*c*) if so, when the plant will be commissioned?

SRI K. T. RATHOD. (Minister of State for Fisheries and Horticulture)—

(*a*) No.